

## ಗುರೂಜಿ ಕೃಷ್ಣಾನಂದ

(1939–2012)

ಮಹರ್ಷಿ ಅಮರರವರ (1919–1982) ನೇರ ಶಿಷ್ಯರಾಗಿದ್ದರು. ಅಮರರವರು ತಮ್ಮ ಒಂಭತ್ತೆಯ ವಯಸ್ಸಿನಲ್ಲಿಯೇ ಮೇಲಿನ ಲೋಕಗಳಲ್ಲಿರುವ ಋಷಿಗಳ ಸಂಪರ್ಕಕ್ಕೆ ಬಂದು ಧ್ಯಾನ ಶಾಸ್ತ್ರವನ್ನು ಮನುಕುಲಕ್ಕೆ ತಂದರು. ಗುರೂಜಿಯವರು 1977ರಲ್ಲಿ ಅಮರರವರನ್ನು ಭೇಟಿ ಮಾಡಿ, 1988ರಿಂದ ಧ್ಯಾನ ಹೇಳಿಕೊಡಲು ಪ್ರಾರಂಭಿಸಿದರು. 1988ರಲ್ಲಿ ಮಾನಸ ಫೌಂಡೇಶನ್ ಸಂಸ್ಥೆಯನ್ನು ಸ್ಥಾಪಿಸಿ 2007ರಲ್ಲಿ ಆಧ್ಯಾತ್ಮಿಕ ಸತ್ಯಗಳನ್ನು ಸಂಶೋಧಿಸಲು ಒಂದು ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದರು. 2008ರಲ್ಲಿ ಲೈಟ್ ಚಾನಲ್‌ಗಳ ವಿಶ್ವ ಸಂಚಲನವನ್ನು ಪ್ರಾರಂಭಿಸಿದರು.

ಅವರು ಋಷಿ ಮಾರ್ಗವನ್ನು ಸ್ಥಾಪಿಸಿದ್ದಾರೆ. ಶಿಕ್ಷಕರ ಒಂದು ತಂಡವನ್ನು ತರಬೇತಿಗೊಳಿಸಿದ್ದಾರೆ ಮತ್ತು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವರ "Doorways to Light" ಪುಸ್ತಕ ಅತ್ಯಂತ ಜನಪ್ರಿಯತೆ ಗಳಿಸಿದೆ.

### ಮಾನಸ ಫೌಂಡೇಶನ್ (ರಿ)

"ಋಷಿ ಮಾರ್ಗ"ದ ಧ್ಯಾನದ ತರಗತಿಗಳನ್ನು ತಪೋನಗರದಲ್ಲಿ, ಆನೇಕಲ್‌ನಲ್ಲಿ ಮತ್ತು ಬೆಂಗಳೂರು ನಗರದ ಹಲವು ಕೇಂದ್ರಗಳಲ್ಲಿ ನಡೆಸಲಾಗುತ್ತದೆ. ಧ್ಯಾನವನ್ನು ಅಂಚೆ ಮತ್ತು ಇ-ಮೇಲ್‌ಗಳ ಮೂಲಕವೂ ಹೇಳಿಕೊಡಲಾಗುತ್ತದೆ.

# ಬೆಳಕು

## ಒಂದು ಅವಕಾಶ ಕೊಡಿ


**ಮಾನಸ ಫೌಂಡೇಶನ್ (ರಿ)**

ತಪೋನಗರ, ಚಿಕ್ಕಗುಬ್ಬಿ, ಹೆಣ್ಣೂರು–ಬಾಗಲೂರು ಮುಖ್ಯ ರಸ್ತೆ
ಬೆಂಗಳೂರು ಅರ್ಬನ್–560 077. ಇಂಡಿಯ.

ಫೋನ್ : (080) 2846 5280, 2271 5501, 093420 30250 (10AM to 4 PM)
ಇ–ಮೇಲ್ : www.lightagemasters.com • info@lightchannels.com
ವೆಬ್‌ಸೈಟ್ : www.lightagemasters.com • www.lightchannels.com

**ಬೆಳಕು ಅಂದರೆ ಏನು ?**

ಇದು ಭೌತಿಕ ಮಟ್ಟದ ಬೆಳಕಲ್ಲ. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಎಲ್ಲ ಜೀವಶಕ್ತಿಗಳ ಮೂಲ. ಬೆಳಕು ದೇವರು.

**ಬೆಳಕು ಎಲ್ಲಿದೆ ?**

ಎಲ್ಲಾ ಕಡೆ ಇದೆ.

**ಬೆಳಕು ಎಲ್ಲ ಕಡೆ ಇದ್ದರೆ, ಅದನ್ನು ಚಾನಲ್ ಮಾಡುವ ಅವಶ್ಯಕತೆ ಏಕೆ ?**

ಏಕೆಂದರೆ, ಬೆಳಕು ಅತಿ ಸೂಕ್ಷ್ಮ ಮಟ್ಟದಲ್ಲಿ ಇರುವುದರಿಂದ.

**ಚಾನಲ್ ಮಾಡುವುದು ಅಂದರೆ ಏನು ?**

ನಮ್ಮ ಇಚ್ಛೆಯಿಂದ, ಮೇಲಿನಿಂದ ನಮ್ಮ ದೇಹದೊಳಗೆ ಹರಿಸಿಕೊಂಡು, ಅನಂತರ, ಸುತ್ತಲೂ ಹರಡುವುದು.

**ಚಾನಲ್ ಮಾಡುವುದು ಹೇಗೆ ಸಹಾಯವಾಗುತ್ತದೆ ?**

ಬೆಳಕಿನಿಂದ ಬರುವ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ಮುಟ್ಟುತ್ತವೆ. ಈ ಕಂಪನಗಳು ಹೀಲಿಂಗ್, ಪ್ರೀತಿ, ಶಾಂತಿ ಮತ್ತು ಎಲ್ಲಾ ಶುಭಕರವಾದ ಶಕ್ತಿಗಳನ್ನು ಹೊಂದಿರುತ್ತವೆ. ಇವು ಪರಿವರ್ತನೆಗೆ ಸಹಾಯಮಾಡುತ್ತವೆ. ಇದರಿಂದ ನಾವು ಒಳ್ಳೆಯ ಮನುಷ್ಯರಾಗುತ್ತೇವೆ. ಪ್ರಪಂಚ ಉತ್ತಮವಾಗುತ್ತದೆ.

**ಚಾನಲ್ ಮಾಡುವುದರಿಂದ ನಮಗೆ ಹೇಗೆ ಸಹಾಯವಾಗುತ್ತದೆ ?**

ನಮ್ಮ ವಿಚಾರಗಳ, ಭಾವನೆಗಳ ಮತ್ತು ಜೀವನದ ಗುಣಮಟ್ಟ ಉತ್ತಮಗೊಳ್ಳುತ್ತದೆ. ಘರ್ಷಣೆಗಳು ಕಡಿಮೆಯಾಗುತ್ತವೆ. ವಿವೇಕ ಬೆಳೆಯುತ್ತದೆ. ಜೀವನ ಮಾರ್ಪಾಡಾಗುತ್ತದೆ.

**ಬೆಳಕನ್ನು ಯಾರುಯಾರು ಚಾನಲ್ ಮಾಡಬಹುದು? ಏನಾದರೂ ಸಿದ್ಧತೆ ಬೇಕೆ? ಏನಾದರೂ ನಿಯಮಗಳಿವೆಯೇ ?**

ಬೆಳಕನ್ನು ಯಾರು ಬೇಕಾದರೂ ಚಾನಲ್ ಮಾಡಬಹುದು. ಎಲ್ಲರೂ ಮಾಡಬಹುದು. ಯಾವ ಸಿದ್ಧತೆಯೂ ಬೇಕಿಲ್ಲ. ಯಾವ ನಿಯಮಗಳೂ ಇಲ್ಲ.

## ಲೈಟ್ ಚಾನಲ್‌ಗಳ ವಿಶ್ವ ಸಂಚಲನ

ಇದನ್ನು ಋಷಿ ಮಾರ್ಗದ ಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18–5–2008 ರಂದು ಪ್ರಾರಂಭಿಸಿದರು.

ಈ ಸಂಚಲನದಲ್ಲಿ ಜನರು ಪ್ರತಿದಿನ, ಏಳುವಾಗ ಅಥವಾ ಮಲಗುವಾಗ, ತಂತಮ್ಮ ಜಾಗಗಳಿಂದಲೇ ಬೆಳಕನ್ನು ಏಳು ನಿಮಿಷಗಳ ಕಾಲ ಚಾನಲ್ ಮಾಡುತ್ತಾರೆ.

ಸಂಚಲನದ ಮುಖ್ಯ ಗುರಿ ವಿಶ್ವಶಾಂತಿ.

ಎಲ್ಲ ಅಥವಾ ಹೆಚ್ಚು ಜನರು ಚಾನಲ್ ಮಾಡಿದರೆ, ಪ್ರಭಾವ ಹೆಚ್ಚಾಗುತ್ತದೆ. ಒಂದೇ ಸಮಯದಲ್ಲಿ ಮಾಡಿದರೆ ಪ್ರಭಾವ ಬೇಗ ಆಗುತ್ತದೆ.

## ತಂತ್ರ

ಮೇಲೆ ಬೆಳಕಿನ ಒಂದು ಸಮುದ್ರವಿದೆ ಎಂದು ಊಹಿಸಿಕೊಳ್ಳಿ. ಬೆಳಕು ಇಳಿದು ಬಂದು ದೇಹವನ್ನು ತುಂಬುತ್ತದೆ ಎಂದು ಊಹಿಸಿ. ಅನಂತರ, ಬೆಳಕು ಕ್ರಮೇಣ ಮನೆ, ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡುತ್ತದೆ ಎಂದು ಊಹಿಸಿಕೊಳ್ಳುತ್ತಾ ಕಡಿಮೆ ಎಂದರೆ ಏಳು ನಿಮಿಷಗಳು ಅಭ್ಯಾಸ ಮಾಡಿ.

## ಸಂಚಲನದ ವಿಶಿಷ್ಟತೆ

* ಬೆಳಕಿನಿಂದ ಏಕತೆ.
* ಯಾವ ಮತಧರ್ಮಕ್ಕೂ ಸೇರದ್ದು, ವಿಶ್ವಾತ್ಮಕವಾದದ್ದು.
* ಯಾವ ನಿರ್ಬಂಧಗಳಿಲ್ಲ, ನಿಯಮಗಳಿಲ್ಲ.
* ಯಾವ ಸದಸ್ಯತ್ವವೂ ಇಲ್ಲ.
* ಪ್ರತಿಯೊಬ್ಬರೂ ಶಾಂತಿಗಾಗಿ ದುಡಿಯಲು ಅವಕಾಶ.
* ವ್ಯಕ್ತಿಗಳಿಗೆ ಸಹಾಯ, ಪ್ರಪಂಚಕ್ಕೂ ಸಹಾಯ.
* ಜಗತ್ತು ಮತ್ತು ನಮ್ಮೆಲ್ಲರನ್ನು ಹೊಸ ಯುಗಕ್ಕೆ ಪ್ರವೇಶಿಸುವುದಕ್ಕೆ ಸಿದ್ಧತೆಗೊಳಿಸುವುದು.